## ಜೈ ಗುರುದೇವ

### ಅಧ್ಯಾಯ ೧ – ಗುರುದೇವನ ಜನನ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

#### ದಿವ್ಯಶಿಶುವಿನ ಜನನ

೧೧೩.ಶುಕ್ಲಪಕ್ಷದ ಬಿದಿಗೆ ಚಂದ್ರಮ್ಮೈದೋರೆ ।
ಚಂದ್ರಕಾಂತಿಯು ಪ್ರಶಾಂತಿಯನಾಗ ನೀಡೆ ॥

೧೧೪.ಭತ್ತಕುಟ್ಟುವ ನೆಲೆಯೆ ಪ್ರಸವದಾಕೋಣೆ ।
ಭಕ್ತಬಂಧುವ ಪಡೆದಳಲ್ಲಿ ನಮ್ಮಜ್ಜಿ ॥

೧೧೫.ಫಾಲ್ಗುಣದ ಶುಕ್ಲಪಕ್ಷದ ಬಿದಿಗೆ ಮಿತಿಯು ।
ರವಿಚಂದ್ರಮಂಗಳ ಗೃಹಗಳೋನ್ನತಿಯು ॥

೧೧೬.ಶುಭವಿರಲು ಗೋಲೋಕದೊಡೆಯ ಧರೆಗಿಳಿದ ।
ಅಭಯಂಕರನ ನಟನೆಗೊದಗಿತಾರಂಭ ॥

೧೧೭.ಭೂಲೋಕದೊಳಗೆ ನೆಲೆಗೊಂಡಿಹರು ನರರು ।
ಲೀಲಾವತಾರವನು ತಿಳಿಯುವವರ್‍ಯಾರು ॥

೧೧೮.ಭತ್ತ ಮೆರೆಯುವ ನೆಲೆಯೊರಳಕುಣಿಯಿತ್ತು ।
ಹುಟ್ಟಿದಾ ಶಿಶುವುರುಳಿ ಅದರಲ್ಲಿ ಬಿತ್ತು ॥

೧೧೯.ಸನಿಹದಲಿ ಕಮ್ಮಾರಗಿತ್ತಿ ಧನಿಯಿರಲು ।
ಜನಿಸಿದಾ ಮಗುವೆಲ್ಲಿ ಎಂದು ಹುಡುಕಿದಳು ॥

೧೨೦.ಶಿಶುವಿನಾಕ್ರಂದನವನಾಲಿಸುತ ಓಡಿ ।
ಒರಳಕುಳಿಯೊಳಗುರುಳಿದಾ ಮಗುವ ನೋಡಿ ॥

೧೨೧.ಹುಟ್ಟಿದೊಡನೇ ಜಾರಿತೆಂತು ಈ ಶಿಶುವು ।
ಅಚ್ಚರಿಯು ಅಕ್ಕಿಯಾಗುವ ಕುಳಿಯೊಳಿಹುದು ॥

೧೨೨.ಸಾಮಾನ್ಯಶಿಶುಗಳನು ಮೀರಿದಾಕಾರ ।
ಆಕರ್ಷಣೆಯ ಚಂದ್ರಬಿಂಬದಾ ಕಾಯ ॥

೧೨೩.ಮುದ್ದಾದ ಈ ಮಗುವ ನೋಡಿದರೆ ಸಾಕು ।
ಸದ್ಬೋಧೆಗೊಳಗಾಗಿ ಕಾಣುವುದು ಬೆಳಕು ॥

೧೨೪.ಖುದಿರಾಮನನು ಕರೆದು ಬನ್ನಿರೆಂದವಳು ।
ಮುದ್ದಾದ ಈ ಮಗುವ ನೋಡಿರೆಂದೆನಲು ॥

೧೨೫.ಚಲುವಿನಾ ಖನಿಗೆ ನೀವ್ ತಂದೆಯಾಗಿಹಿರಿ ।
ಸೊಗಸಿನಾ ಶಿಶುವ ನಾನೆಂತು ವರ್ಣಿಸಲಿ ॥

೧೨೬.ಕರೆದು ಕಾಣಿಸಲು ಧನಿ ಖುದಿರಾಮನಾಗ ।
ಗಡಿಬಿಡಿಯೊಳಯ್ತಂದು ಆ ಶಿಶುವ ಕಂಡ ॥

೧೨೭.ಅಹಹ ಈ ಶಿಶುವಿನಲಿ ಸೂಸುತಿಹ ಕಾಂತಿ ।
ಮಹಿಯನೇ ಬೆಳಗಿಸುವ ದಿವ್ಯಪ್ರಶಾಂತಿ ॥

೧೨೮.ಅಂಗಾಂಗ ಚಿಹ್ನೆಗಳ ನೋಡೆ ಲಕ್ಷಣದಿ ।
ಶುಭ ಭವಿಷ್ಯವ ಸಾರುತಿಹುದು ಕಣಕಣದಿ ॥

೧೨೯.ರೋಮಾಂಚನಂಗೊಂಡು ಭಾವಪರವಶದಿ ।
ಶಿಶುವ ನೋಡಿದನು ಎವೆಮಿಟುಕದಂದದಲಿ ॥

೧೩೦.ಕದಲದಾ ದೃಷ್ಟಿಯಲಿ ಕಣ್ಣರಳುತಿರಲು ।
ತೊದಲಿದನು ತಾ ಧನ್ಯನೆಂದುಸಿರ ತಡೆದು ॥

೧೩೧.ಕಂಡಿರುವ ಕನಸೆಲ್ಲ ನನಸಾಯಿತೀಗ ।
ಸಂಭ್ರಮದ ಈ ಪ್ರಸವ ನಮ್ಮಯ ಸುಯೋಗ ॥

೧೩೨.ಅದಿತಿ ಕೌಸಲೆ ದೇವಕಿಯರ ಸೌಭಾಗ್ಯ ।
ಒದಗಿ ನೀ ಪುಣ್ಯವತಿಯಾದೆಯ್ಯೆ ಸಹಜ ॥

೧೩೩.ಪೂರ್ಣಚಂದ್ರಪ್ರಕಾಶ ಹೊಮ್ಮುತಿದೆಯಿಲ್ಲಿ ।
ಸುಮ್ಮನಿರಿ ಗದ್ದಲದ ಸುದ್ದಿಗೈಯ್ಯದಿರಿ ॥

೧೩೪.ತಂದೆ ತಾಯಂದಿರಿಂತಿರಲು ಸಂತಸದಿ ।
ಬಂದರ್‍ಯೆ ನೆರೆಹೊರೆಯ ಮಂದಿ ಕಾತರದಿ ॥

೧೩೫.ನೋಡಿ ನಲಿದರು ಶಿಶುವ ಬಣ್ಣಿಸುತ ನಿಂತು ।
ಕಣ್ದಣಿಯೆ ಪರಿಕಿಸುತ ಚೆಲುವಿಗುರೆ ಸೋತು ॥

೧೩೬.ಒಮ್ಮೆ ಮತ್ತೊಮ್ಮೆ ಮಗುದೊಮ್ಮೆ ಪುನಪುನಹ ।
ಕಾಣುವಾದಾಹ ತಣಿಯದೆ ಕಾಂಬರಹಹ ॥

೧೩೭.ಹಿಂದೆಂದು ಕಂಡರಿಯೆವೀತೆರದ ಶಿಶುವ ।
ಮುಂದೆಯೂ ಕಾಣೆವೆಂದರು ನೋಡಿ ಚಲುವ ॥

೧೩೮.ಆನಂದ ಉಮ್ಮಳಿಪುದೀ ಮಗುವ ನೋಡೆ ।
ಏನಿದು ಅಪೂರ್ವ ಸೊಗಸೆಂದು ಕೊಂಡಾಡಿ ॥

೧೩೯.ಜೀವನವೆ ಪಾವನವು ಈ ಮಗುವಿನಿಂದ ।
ಭಾವನೆಗೆ ಬಲ ಬಂದುದೀಶಿಶುವಿನಿಂದ ॥

೧೪೦.ದೇವರನೆ ಕಂಡರೂ ಮನವೊಲಿಯಲಿಲ್ಲ ।
ಯಾವ ಪುಣ್ಯವೊ ಕಣ್ಣ ಪಾಪ ಹೋಯ್ತಲ್ಲ ॥

೧೪೧.ಚಂದ್ರಮನ ತೆರದಿ ಕಂಗೊಳಿಸುತಿದೆ ಮಗುವು ।
ಅಂಗಾಂಗದೊಳಗವಿತು ಮೆರೆಯುತಿದೆ ಚಲುವು ॥

೧೪೨.ನಮ್ಮೂರಿನಾ ಭಾಗ್ಯವೆಂದೂರ ಜನರು ।
ಹೆಮ್ಮೆ ಪಡುತೆಲ್ಲರೂ ಮಗುವ ಪೊಗಳುವರು ॥

೧೪೩.ಈ ಸುದ್ದಿಯನು ಕೇಳಿ ದೂರದೂರಿಂದ ।
ಆಸೆಪಟ್ಟೈತಂದು ನೋಡಿದರು ಮಗುವ ॥

೧೪೪.ಮನೆಯಂಗಳದಿ ಜನರ ಜಾತ್ರೆಯನು ನೋಡಿ ।
ಘನಮಹಿಮೆಯೆಂದ ಖುದಿರಾಮ ಮುದಗೂಡಿ ॥